# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** **ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಉಡುಗಣಿ ಹೋಬಳಿ, ಕುಟ್ರಳ್ಳಿ ಗ್ರಾಮದ ಸ.ಸಂ. 85/4 ರಲ್ಲಿ ಕೃಷಿ ಇಲಾಖೆಗೆ ಸೇರಿದ 4-21 ಎಕರೆ/ಗುಂಟೆ ಜಮೀನನ್ನು ಕೆ.ಎಸ್.ಆರ್.ಟಿ.ಸಿ ಶಿವಮೊಗ್ಗ ಇವರಿಗೆ ಬಸ್ ಡಿಪೋ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಹಸ್ತಾಂತರಿಸುವ ಕುರಿತು.**

**ಓದಲಾಗಿದೆ:**

1. ಮಾನ್ಯ ಶಾಸಕರು ಶಿಕಾರಿಪುರ ವಿಧಾನ ಸಭಾ ಕ್ಷೇತ್ರ ರವರ ಪತ್ರ ಸಂಖ್ಯೆ: ಶಾ.ಗೃ.ಕ.ನಂ.267, ದಿನಾಂಕ:19.11.2017.
2. ಕೃಷಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ: SFS-3/ಉಕೃನಿ (ಬೀರಾಕ್ಷೇ)/ಶಿ.ಬ.ಡಿ/ 2017-18 ದಿನಾಂಕ 01.08.2018.
3. ಹಿಂದಿನ ಮಾನ್ಯ ಕೃಷಿ ಸಚಿವರ ಹಿಂಬರಹ ಸಂಖ್ಯೆ: ಕೃ.ಸ. 1473, ದಿನಾಂಕ:28.12.2018.

<u>ಪ್ರಸ್ತಾವನೆ:</u>

ಮೇಲೆ ಓದಲಾದ (1) ರಲ್ಲಿ ಮಾನ್ಯ ಶಾಸಕರು, ಶಿಕಾರಿಪುರ ವಿಧಾನ ಸಭಾ ಕ್ಷೇತ್ರ (ಹಾಲಿ ಮಾನ್ಯ ಲೋಕಸಭಾ ಸದಸ್ಯರು) ಶಿವಮೊಗ್ಗ ಜಿಲ್ಲೆ ಶಿಕಾರಿಪುರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ನಿಲ್ದಾಣ ಪ್ರಾರಂಭವಾಗುವುದರಿಂದ ಸದರಿ ಬಸ್ ನಿಲ್ದಾಣಕ್ಕೆ ಪೂರಕವಾಗಿ ಡಿಪೋ ಪ್ರಾರಂಭಿಸಲು ಶಿಕಾರಿಪುರ ತಾಲ್ಲೂಕಿನ, ಉಡುಗುಣಿ ಹೋಬಳಿ, ಕುಟ್ರಳ್ಳಿ ಗ್ರಾಮದ ಸರ್ವೆ ನಂ.85/4 ರಲ್ಲಿ ವಿಸ್ತೀರ್ಣ 4-21 ಎಕರೆ/ಗುಂಟೆ ಪ್ರದೇಶವು ಸೀಡ್ಸ್ ಫಾರಂ ಜಾಗವು ಖಾಲಿ ಇದ್ದು, ಈ ಜಮೀನು ಯಾವುದೇ ಕೃಷಿ ಉದ್ದೇಶಕ್ಕೆ ಬಳಸಲಾಗುತ್ತಿಲ್ಲ. ಸದರಿ ಜಮೀನನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಶಿವಮೊಗ್ಗ ವಿಭಾಗಕ್ಕೆ ಹಸ್ತಾಂತರಿಸಲು ಕೋರಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಕೃಷಿ ಆಯುಕ್ತರವರ ಪತ್ರದಲ್ಲಿ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಉಡುಗುಣಿ ಹೋಬಳಿ, ಕುಟ್ರಳ್ಳಿ ಗ್ರಾಮದಲ್ಲಿ ಕೃಷಿ ಇಲಾಖೆಯ ಅಧೀನದಲ್ಲಿರುವ ಸರ್ವೆ ನಂ.85/4 ರಲ್ಲಿರುವ 4-21 ಎಕರೆ/ಗುಂಟೆ ಪ್ರದೇಶದಲ್ಲಿ ಪ್ರಸ್ತುತ ಬೀಜೋತ್ಪಾದನಾ ಚಟುವಟಿಕೆ ಕಾರ್ಯಗಳನ್ನು ಹಮ್ಮಿಕೊಂಡಿರುವುದಿಲ್ಲ, ಸದರಿ ಚಟುವಟಿಕೆಗಳಿಗೆ ಸಿಬ್ಬಂದಿ, ಎತ್ತುಗಳು, ಮೆಷನರಿ ಕೊರತೆಯಿಂದಾಗಿ ಉತ್ಪಾದನೆ ಸ್ಥಗಿತಗೊಂಡಿರುವುದಾಗಿ ತಿಳಿಸುತ್ತಾ ಎಲ್ಲಾ ಸೌಕರ್ಯಗಳನ್ನು ಒದಗಿಸಿದಲ್ಲಿ ಪುನಃ ಬೀಜೋತ್ಪಾದನಾ ಚಟುವಟಿಕೆಯನ್ನು ಪ್ರಾರಂಭಗೊಳಿಸುವುದಾಗಿ ಹಾಗೂ ಇಲಾಖೆಯ ಸದರಿ ಸ್ಥಿರಾಸ್ತಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ನೀಡಿದ್ದಲ್ಲಿ ಅಪಾರ ಪ್ರಮಾಣದ ನಷ್ಟವಾಗುವುದಾಗಿ ಜಂಟಿ ಕೃಷಿ ನಿರ್ದೇಶಕರು, ಶಿವಮೊಗ್ಗ ಇವರು ತಿಳಿಸಿರುವ ಪ್ರಯುಕ್ತ ಸದರಿ ಜಮೀನನ್ನು ಹಸ್ತಾಂತರಿಸುವ ಪ್ರಸ್ತಾವನೆಯನ್ನು ಕೈಬಿಡಬೇಕಾಗಿ ಕೋರಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಹಿಂದಿನ ಮಾನ್ಯ ಕೃಷಿ ಸಚಿವರವರು ಹಿಂದಿನ ಮಾನ್ಯ ವಿರೋಧ ಪಕ್ಷದ ನಾಯಕರವರ ಪತ್ರದ ಮೇಲೆ ಶಿಕಾರಿಪುರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬಸ್ ಡಿಪೋ ನಿರ್ಮಾಣ ಮಾಡುವ ಸಲುವಾಗಿ ಶಿಕಾರಿಪುರ ಉಡುಗುಣಿ ಹೋಬಳಿ ಕುಟ್ರಳ್ಳಿ ಗ್ರಾಮದ ಸರ್ವೆ ನಂ.85/4 ರಲ್ಲಿ ವಿಸ್ತೀರ್ಣ 4-21 ಎಕರೆ/ಗುಂಟೆ ಪ್ರದೇಶದ ಸೀಡ್ಸ್ ಫಾರಂರ ಜಮೀನನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೃಷಿ ಚಟುವಟಿಕೆಗೆ ಬಳಸದೇ ಇರುವುದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಶಿವಮೊಗ್ಗ ವಿಭಾಗಕ್ಕೆ ಹಸ್ತಾಂತರಿಸುವಂತೆ ಕೋರಿರುವುದರಿಂದ ಈ ಬಗ್ಗೆ ಪ್ರಸ್ತಾವನೆಯ ಕಡತ ಮಂಡಿಸುವುದು ಎಂದು ತಿಳಿಸಿರುತ್ತಾರೆ.

..2)

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಶವಾಗಿ ಪರಿಶೀಲಿಸಿ, ಸಾರ್ವಜನಿಕ ಹಿತದೃಷ್ಟಿಯಿಂದ ಕೃಷಿ ಇಲಾಖೆಯ ಅಧೀನದಲ್ಲಿರುವ ಶಿಕಾರಿಪುರ ತಾಲ್ಲೂಕು ಉಡುಗುಣಿ ಹೋಬಳಿ ಕುಟ್ರಳ್ಳಿ ಗ್ರಾಮದ ಸರ್ವೆ ನಂ.85/4 ರಲ್ಲಿರುವ ವಿಸ್ತೀರ್ಣ 4–21 ಎಕರೆ/ಗುಂಟೆ ಜಮೀನನ್ನು ಶಿಕಾರಿಪುರ ಬಸ್ ಡಿಪೋ ನಿರ್ಮಾಣದ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಗಳು ಶಿವಮೊಗ್ಗ ಇವರಿಗೆ ಹಸ್ತಾಂತರಿಸುವ ಸಲುವಾಗಿ ಹಾಗೂ ಈ ಜಮೀನಿನ ಬದಲಿಗೆ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕು, ತಾಳಗುಂದ ಹೋಬಳಿ, ಸಹಸ್ರವಳ್ಳಿ ಗ್ರಾಮದ ಸರ್ವೆ ನಂ.28 ರಲ್ಲಿ ಕೃಷಿ ಉದ್ದೇಶಕ್ಕೆ ಯೋಗ್ಯವಿರುವ ಕನಿಷ್ಠ 5–03 ಎಕರೆ /ಗುಂಟೆ ಜಮೀನನ್ನು ಕೃಷಿ ಇಲಾಖೆಗೆ ಉಚಿತವಾಗಿ ಹಸ್ತಾಂತರಿಸಲು ಕಂದಾಯ ಇಲಾಖೆಯು ಒಪ್ಪಿರುವುದರಿಂದ, ಮೇಲೆ ತಿಳಿಸಿದ ಜಮೀನನ್ನು ಜಿಲ್ಲಾಧಿಕಾರಿಗಳು ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರಿಗೆ ಹಸ್ತಾಂತರಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಕೃಇ 224 ಕೃಇಕ 2017, ಬೆಂಗಳೂರು, ದಿನಾಂಕ 19–09–2019

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಬಸ್ ಡಿಪೋ ನಿರ್ಮಾಣದ ಉದ್ದೇಶಕ್ಕಾಗಿ, ಕೃಷಿ ಇಲಾಖೆಗೆ ಸೇರಿದ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು ಉಡುಗುಣಿ ಹೋಬಳಿ ಕುಟ್ರಳ್ಳಿ ಗ್ರಾಮದ ಸರ್ವೆ ನಂ.85/4 ರಲ್ಲಿನ 4–21 ಎಕರೆ/ಗುಂಟೆ ಜಮೀನನ್ನು ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರಿಗೆ ಈ ಕೆಳಕಂಡ ಷರತ್ತಿನೊಂದಿಗೆ ಹಸ್ತಾಂತರಿಸಲು ಆದೇಶಿಸಿದೆ.

**ಷರತ್ತು:**

ಸದರಿ ಜಮೀನಿನ ಬದಲಿಗೆ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕು, ತಾಳಗುಂದ ಹೋಬಳಿ, ಸಹಸ್ರವಳ್ಳಿ ಗ್ರಾಮದ ಸರ್ವೆ ನಂ.28 ರಲ್ಲಿರುವ 5–03 ಎಕರೆ / ಗುಂಟೆ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 22–ಎ(3)(i)ರ ಮೇರೆಗೆ ಕೃಷಿ ಇಲಾಖೆಗೆ ಬೀಜೋತ್ಪಾದನಾ ಉದ್ದೇಶಕ್ಕಾಗಿ ಉಚಿತವಾಗಿ ಹಸ್ತಾಂತರಿಸುವುದು.

ಈ ಆದೇಶವನ್ನು ಕಂದಾಯ ಇಲಾಖೆಯ ಟಿಪ್ಪಣಿ ಸಂಖ್ಯೆ: ಆರ್‌ಡಿ 02 ಎಲ್‌ಜಿಎಸ್ 2019, ದಿನಾಂಕ:03.09.2019ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ
B S Nagarathnamma
(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಗೆ:

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ), ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು–560001.

2. ಪ್ರಧಾನ ಮಹಾಲೇಖಪಾಲರು (ಇ&ಆರ್‌ಎಸ್‌ಎ), ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು
9. ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ
10. ಜಂಟಿ ಕೃಷಿ ನಿರ್ದೇಶಕರು, ಶಿವಮೊಗ್ಗ ಜಿಲ್ಲೆ.
11. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು
12. ಸರ್ಕಾರದ ಉಪ ಕಾರ್ಯದರ್ಶಿ-1 & 2, ಕೃಷಿ ಇಲಾಖೆ ಇವರ ಆಪ್ತ ಶಾಖೆ, ಬೆಂಗಳೂರು
13. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.